This question paper consists of 31 questions and 8 printed pages.

Roll No.
ರೋಲ್ ನಂ.

Code No. 62/S/N/K

Set - A

# KANNADA

# ಕನ್ನಡ

# (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ______________________

Signature of Invigilators 1. ______________________
ಉಸ್ತು ವಾರಿದಾರರ ರುಜು
2. ______________________

## ಸಾಮಾನ್ಯ ಸೂಚನೆಗಳು :

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **62/S/N/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



UNNATI EDUCATIONS
9899436384, 9654279279

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರಪುಸ್ತಕದಲ್ಲಿ ಬರೆಯಿರಿ.

(2) ಪ್ರಶ್ನೇಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಪ್ರಶ್ನಸಂಖ್ಯೆ 1 ರಿಂದ 11 ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

---

1 'ಆರಂಕುಸವಿಟ್ಟೊಡಂ' ಇದನ್ನು ಹೇಳಿದವರು .............. 1

(A) ರನ್ನ (B) ಪೊನ್ನ

(C) ಜನ್ನ (D) ಪಂಪ

2 ಅಶೋಕವನದಲ್ಲಿರುವ ದೇವಾಲಯ ................... 1

(A) ಕಾಳಿ (B) ಭದ್ರಕಾಳಿ

(C) ಚಾಮುಂಡಿ (D) ಸೀತಾದೇವಿ

3 'ಚಂದ್ರನನ್ನು ಕರೆಯಿರಿ ಭೂಮಿಗೆ' ಇದನ್ನು ಬರೆದವರು ................ 1

(A) ವೈದೇಹಿ (B) ಸವಿತಾ ನಾಗಭೂಷಣ

(C) ಗೀತಾ ನಾಗಭೂಷಣ (D) ಜಯದೇವಿ

4 ಚೀಣಿಯರಿಗೆ 'ಪಾಶ್ಚಾತ್ಯ ಪ್ರಪಂಚ' ವೆಂದರೆ ............. 1

(A) ಇಂಡಿಯಾ (B) ಭೂತಾನ್

(C) ಕೊರಿಯಾ (D) ಜಪಾನ

5 ಚಿನ್ನವನ್ನು ತೆಗೆಯೋರು ಅನ್ನವನ್ನು .................. 1

(A) ಕಾಣದೋರು (B) ಕಾಣುವರು

(C) ನೋಡುವರು (D) ಉಣ್ಣುವರು

6 'ಇಂಟರ್‌ನೆಟ್' ಎಂದರೆ ಕನ್ನಡದಲ್ಲಿ ............. 1

(A) ದೊಡ್ಡಜಾಲ (B) ಸಣ್ಣಜಾಲ

(C) ಅಂತರ್ಜಾಲ (D) ಮಹಾಜಾಲ

7 ಕಥಾನಾಯಕ ಎಲ್ಲಿ ಹೋಗಿ ಬ್ಯಾರಿಸ್ಟರ್ ಆಗಬೇಕೆಂದಿದ್ದ ? 1

(A) ಅಮೇರಿಕಾ (B) ಇಂಗ್ಲೆಂಡ್

(C) ಚೀನಾ (D) ಐರ್ಲೆಂಡ್



UNNATI EDUCATIONS
9899436384, 9654279279

8 ಮಾಲೆಗೆ..................... ಯಾಗು. 1

(A) ಕವಿ (B) ಒಲೆ

(C) ಚೂಡಾಮಣಿ (D) ಜಪಮಣಿ

9 ಲೇಖಕರ ಶತ್ರು .................. 1

(A) ರೊಮೆಂಟ್ (B) ಬೆಳಗಿನ ಸಮಯ

(C) ಹಾಸ್ಟೇಲು (D) ಗಡಿಯಾರ

10 ಸ್ತ್ರಿಯ ಸ್ವಭಾವಕ್ಕೆ ಹಿಂಸೆ ................ 1

(A) ಸಹಜಗುಣ (B) ದೈವಗುಣ

(C) ರಾಕ್ಷಸಗುಣ (D) ಸರಿಯಾದ ಗುಣ

11 ಜಲವೆ ಸಕಲ ಕುಲಕೆ ............. 1

(A) ತಾಯಲ್ಲವೆ (B) ತಂಗಿಯಲ್ಲವೆ

(C) ತಂದೆಯಲ್ಲವೆ (D) ಬುಂಧುವಲ್ಲವೆ

12 ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ ಃ

ಪುಣ್ಯಾತ್ಮರಿಗೆ ಒಬ್ಬ ಶಿಷ್ಯನಿದ್ದ. ಅವನಹೆಸರು ದುಷ್ಟ ಅಂತ ಇತ್ತು. ಆ ಶಿಷ್ಯನಿಗೆ ತನ್ನ ಹೆಸರಿನ ಬಗ್ಗೆ ಅತೀವ ನೋವಿತ್ತು. ಕೆಟ್ಟ ಕೇಲಸ ಮಾಡದಿದ್ದರೂ ಲೋಕದ ದೃಷ್ಟಿಯಲ್ಲಿ ದಷ್ಟನಾದೆನಲ್ಲ ಎಂಬ ಕೊರತೆ ಅವನನ್ನು ಕಾಡುತ್ತಿತ್ತು. ಒಂದು ದಿನ ಆತ ಗುರುಗಳ ಬಳಿ ಹೋದ, ತನ್ನ ಸಂಕಟವನ್ನು ತೋಡಿಕೊಂಡ. ಗುರುಗಳು ನಕ್ಕು ನುಡಿದರು, ಹೊರಗಿನ ಪ್ರಪಂಚವನ್ನು ಒಮ್ಮೆ ಸುತ್ತಿ ಬಾ, ಯಾರ್ಯಾರ ಹೆಸರು ಹೇಗಿದೆ ಎಂಬುದನ್ನು ತಿಳಿದುಕೊಂಡು ಬಾ ಎಂದರು.

ಗುರುಗಳ ಆಜ್ಞೆಯಂತೆ - ಶಿಷ್ಯನು ಲೋಕ ಸಂಚಾರಕ್ಕೆ ಹೊರಟ. ಮಾರ್ಗಮಧ್ಯೆ ಭಿಕ್ಷುಕನೊಬ್ಬ ಎದುರಾದ, ಅವನೋ ದಟ್ಟ ದರಿದ್ರ ಆದರೆ ಅವನ ಹೆಸರು ಮಾತ್ರ ಶ್ರೀಮಂತನೆಂದಾಗಿತ್ತು. ಮರುದಿನ ಅವನಿಗೆ ದಾರಿಯಲ್ಲಿ ಅಳುತ್ತಿದ್ದ ಯುವಕನೊಬ್ಬ ಎದುರಾದ, ಯಾಕಯ್ಯಾ ಅಳುತ್ತಿದ್ದೀಯಾ ? ಎಂದು ಪ್ರಶ್ನಿಸಿದ ಆ ಶಿಷ್ಯ. ನನಗೆ ವ್ಯಾಪಾರದಲ್ಲಿ ಅತೀವ ನಷ್ಟವಾಯಿತು. ನನ್ನಮಗ ತನ್ನೆಲ್ಲ ಸಮಯವನ್ನು ಜೂಜಿನಲ್ಲೇ ವ್ಯಯ ಮಾಡುತ್ತಾನೆ. ನನ್ನ ಹೆಂಡತಿಯೂ ಸಹ ಕಾಯಿಲೆಯಲ್ಲೇ ನರಳುತ್ತಿರುತ್ತಾಳೆ ಎಂದ ಆ ಯುವಕ. ಆ ಶಿಷ್ಯನು ಕುತೂಹಲದಿಂದ ನಿಮ್ಮ ಹೆಸರೇನು ಎಂದು ಪ್ರಶ್ನಿಸುತ್ತಾನೆ. ಆ ಯುವಕ ತನ್ನ ಹೆಸರು ಆನಂದ ಎನ್ನುತ್ತಾನೆ. ಅದೇ ದಿನ ಗುರುಗಳ ಶಿಷ್ಯನ ಕಣ್ಮುಂದೆಯೇ ರಾಜಾಜ್ಞೆಯಂತೆ ಒಬ್ಬನನ್ನು ಮರವೊಂದಕ್ಕೆ ನೇಣು ಹಾಕುತ್ತಾರೆ. ಹೀಗೆ ಶಿಕ್ಷೆಗೆ ಗುರಿಯಾದ ವ್ಯಕ್ತಿಯ ಹೆಸರು ಚಿರಂಜೀವಿ ಎಂದಾಗಿರುತ್ತದೆ.

ಧೃತಿಗೆಟ್ಟ ಶಷ್ಯ ಗುರುಗಳ ಬಳಿಗೆ ಹಿಂದಿರುಗುತ್ತಾನೆ. ಏನಯ್ಯ ಶಿಷ್ಯ ದಾರಿಯಲ್ಲಿ ಯಾವ್ಯಾವ ಹೆಸರಿನವರನ್ನು ಸಂಧಿಸಿದೆ ? ಯಾವ ಹೆಸರನ್ನು ಇಟ್ಟು ಕೊಳ್ಳಲು ಬಯಸುತ್ತಿಯಾ ಎಂದು ಗುರುಗಳು ಪ್ರಶ್ನೆ ಮಾಡುತ್ತಾರೆ. ಇಲ್ಲಾ ಗುರುಗಳೇ ನಾನೀಗ ಮನಸ್ಸು ಬದಲಿಸಿಕೊಂಡಿದ್ದೇನೆ. ಕೇವಲ ಹೆಸರನ್ನು ಇಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ, ಎನ್ನುವ ತೀರ್ಮಾನಕ್ಕೆ ಬಂದಿದ್ದೇನೆ ಎಂದು ಉತ್ತರಿಸುವನು.



UNNATI EDUCATIONS
9899436384, 9654279279

ಪ್ರಶ್ನೆಗಳು :

(1) ಶಿಷ್ಯನಿಗೆ ಅತೀವ ನೋವಾದ ವಿಷಯ ................. 1

(A) ಕಷ್ಟದಿಂದ (B) ಸಂಕಷ್ಟದಿಂದ

(C) ಗುರುವಿನಿಂದ (D) ಹೆಸರಿನಿಂದ

(2) ಯಾವ ಕೊರತೆ - ಅವನನ್ನು ಕಾಡುತಿತ್ತು ? 1

(A) ಹಣದ (B) ದುಷ್ಟನಾದ

(C) ಊಟದ (D) ಹಸುವಿನ

(3) ಗುರುಗಳ ಹತ್ತಿರ ಏನನ್ನು ತೋಡಿಕೊಂಡ ? 1

(4) ಶ್ರೀಮಂತನ ವಾಸ್ತವತೆ ಏನು ? 2

(5) ಆನಂದನ ಗೋಳು ಏನೇನಾಗಿತ್ತು ? 2

(6) ದುಷ್ಟನ ಗುರು ಯಾರು ? 1

(7) ರಾಜಾಜ್ಞೆ ಯಾವುದು ? ಆಜ್ಞೆಗೆ ಗುರಿಯಾದ ವ್ಯಕ್ತಿಯ ಹೆಸರೇನು ? 2

(8) ಧೃತಿಗೆಟ್ಟ ಶಿಷ್ಯನಿಗೆ ಗುರುಗಳ ಪ್ರಶ್ನೆ ಏನು ? 2

(9) ಈ ಗದ್ಯಭಾಗಕ್ಕೆ ಸೂಕ್ತವಾದ ತಲೆಬರಹ ಕೊಡಿ. 1

13 ಕೊಟ್ಟಿರುವ ಪದ್ಯವನ್ನು ಓದಿರಿ. ಕೆಳಗೆ ಕೊಟ್ಟಿರುವ ಪ್ರಶ್ನಗಳಿಗೆ ಉತ್ತರಿಸಿರಿ :

ಗುಡಿ, ಚರ್ಚು, ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನೀ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೆ, ಬೇಗ ಬನ್ನಿ !
ಅದೋ ನೋಡಿ, ರಷ್ಯಾ, ಜಪಾನು, ತರ್ಕಗಳೆಲ್ಲ
ಪರೆಗಳಚಿ ಹೊರಟಿಹವು ಹೊಸ ಪಾಯಣಕ್ಕೆ...........

- ಕುವೆಂಪು

(1) ಮಾರಿ ಎಂಬುದು ................ 1

(A) ಕೀಳು (B) ದೇವಿ

(C) ಮೌಢ್ಯತೆ (D) ಬಡತನ

(2) ಏನನ್ನು ಬಿಟ್ಟು ಹೊರಬರಬೆಕು ? 1

(3) 'ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ' 2

ವಿಜ್ಞಾನವನ್ನು ಕುರಿತು ಒಂದೆರಡು ವಾಕ್ಯಗಳಲ್ಲಿ ಬರೆಯಿರಿ

(4) 'ಅದೋ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ' 2

ಕವಿ ಇಲ್ಲಿ ಈ ಮೂರು ದೇಶಗಳನ್ನು ಕುರಿತು ಏನು ಹೇಳಲು ಬಯಸಿದ್ದಾರೆ ?

ತಿಳಿಸಿ...... (ಒಂದೆರಡು ಮಾತುಗಳಲ್ಲಿ)


UNNATI EDUCATIONS
9899436384, 9654279279

14 ಬಸವಣ್ಣನವರು ಧರ್ಮದ ಮೂಲ ಯಾವುದು ಎಂದಿದ್ದಾರೆ ? 1

15 ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ವ್ಯತ್ಯಾಸವೇನು ? 1

16 ಕಾರಮಕ್ಕ ಎಂದರೇನು ? 1

17 ನೀಲೇಗೌಡನ ತಂದೆಯ ಹೆಸರೇನು ? 1

18 (a) ಸ್ತುತಿ ನಿಂದೆ ಬಂದಾಗ ಹೇಗಿರಬೇಕು ? 1

(b) ಮುತ್ತು, ಮಾಣಿಕ್ಯ, ಸಂಗಮದೇವ, ಲಿಂಗ - ಇಲ್ಲಿ ಗುಂಪಿಗೆ ಸೇರದ ಪದ. 1

19 ಕೆಳಗಿನವುಗಳಿಗೆ ಉತ್ತರಿಸಿರಿ :

(a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : 2

(1) ಆಟೋಟ

(2) ನೂರೆಂಟು

(3) ಐದಾರು

ಅಥವಾ

(a) 'ಇಗ' ಪ್ರತ್ಯಯ ಸೇರಿಸಿ 2 ಶಬ್ದ ತಯಾರಿಸಿರಿ. 2

(b) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : 2

(1) ಹಿರಿದಾದ + ದಾರಿ

(2) ಮೆಲ್ಲಿತು + ನುಡಿ

(3) ಕಣ್ಣಿನಿಂದ + ಕೆಡು

ಅಥವಾ

(b) ಹಿರೀದರ ಭಾವ 'ಹಿರಿತನ' ಹೀಗೆ 'ತನ' ಪ್ರತ್ಯಯ ಸೇರುವಂತೆ - ಎರಡು ಶಬ್ದ ಬರೆಯಿರಿ. 2

(c) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ ಬರೆಯಿರಿ : 2

(1) ಅಭಿಪ್ರಾಯ

(2) ಅಸಮಾಧಾನ

(3) ಅವಿಶ್ವಾಸ

ಅಥವಾ

(c) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ : 2

(1) ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಶಾಲೆಗೆ ಬರಬೇಕು.

(2) ನಮ್ಮ ದೇಶದಲ್ಲಿ ಅರಣ್ಯ ಸಂಪನ್ಮೂಲ ಹೆಚ್ಚಬೇಕು.


UNNATI EDUCATIONS
9899436384, 9654279279

20 ಕೆಳಗೆ ಕೊಟ್ಟಿರುವ ನುಡಿ ಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ : 2

(1) ಜೊಲ್ಲು ಸುರಿಸು

(2) ಕಾಲಿಗೆ ಬುದ್ಧಿಹೇಳು

(3) ನಾಮ ಹಾಕು

21 'ಊರೂರು' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22 ಔಷಧಿಯನ್ನು ಕೊಳ್ಳುವಾಗ ಯಾವ ಎಚ್ಚರಿಕೆಯನ್ನು ವಹಿಸಬೇಕು ? 4

23 ಬಾಲುಸಾಬಿಯ ಸ್ವಭಾವ ಹಾಗೂ ಗುಣವನ್ನು ವಿವರಿಸಿರಿ. 5

24 ಕಾಳು ಬಿತ್ತಿದರೆ ಭೂಮಿತಾಯಿಯ ಚಮತ್ಕಾರ ಹೇಗೆ ಎಂಬುದನ್ನು ಕವಿ ಬೇಂದ್ರೆ ವರ್ಣಿಸಿರುವರು ? 5

ಅಥವಾ

ಚೌರದವ 'ಅಯ್ಯೊ ಕತ್ತೆ ಕಿವಿ' ಅಂದ ಸಂದರ್ಭವನ್ನು ಬರೆಯಿರಿ. 5

25 ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡೂ ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ : 2+2=4

(a) ಕೂಲಿ - ನಾಲಿ

(b) ತಿಂಡಿ - ತಿನಿಸು

(c) ಕಷ್ಟ - ಕಾರ್ಪಣ್ಯ

26 ಮಹಿಳಾ ವಿಶ್ವವಿದ್ಯಾಲಯ ವಿಜಯಪುರ, ಇಲ್ಲಿ ದಾಖಲಾದ ಪ್ರಯೋಗ ಆಲಯಗಳ ಸಂಖ್ಯೇಗಳನ್ನು ಕೊಡಲಾಗಿದೆ. ಅವುಗಳ ಸಹಾಯದಿಂದ ಏಕ ರೇಖಾಚಿತ್ರವನ್ನು ರಚಿಸಿರಿ. 5

| ವರ್ಷ : | 1996 | 1997 | 1998 | 1999 | 2000 | 2001 | 2002 | 2003 | 2004 | 2005 |
|---|---|---|---|---|---|---|---|---|---|---|
| ಪ್ರಯೋಗ ಆಲಯಗಳು : | 6 | 8 | 11 | 15 | 17 | 20 | 22 | 28 | 30 | 32 |

ಅಥವಾ



UNNATI EDUCATIONS
9899436384, 9654279279

ಈ ಕೆಳಕಂಡ ಅರ್ಜಿನಮೂನೆಯನ್ನು ಭರ್ತಿಮಾಡಿರಿ. 5

ಅರ್ಜಿ ಸಂಖ್ಯೆ : 1060

ಕರ್ನಾಟಕ ವಿಶ್ವವಿದ್ಯಾಲಯ

ಪಾವಟೆನಗರ

ಧಾರವಾಡಾ

## ದಾಖಲಾತಿ ಅರ್ಜಿ

ಕಚೇರಿ ಉಪಯೋಗಕ್ಕಾಗಿ :

ನೊಂದಾಯಿಸಿದ ಸಂಖ್ಯೆ : .............................

ಕಲಿಕಾ ಕೇಂದ್ರಕ್ಕೆ ಅರ್ಜಿ ಮತ್ತು ಶುಲ್ಕ ಸಲ್ಲಿಸಲು ಕೊನೆಯ ದಿನಾಂಕ .......................

### 'ಅ' ವಿಭಾಗ

(1) ವಿದ್ಯಾರ್ಥಿಯ ಪೂರ್ಣಹೆಸರು : .............................

(2) ತಂದೆಯ / ಪೋಷಕರ ಹೆಸರು : .............................

(3) ವಿಳಾಸ : .............................

.............................

(4) ದೂರವಾಣಿ ಸಂಖ್ಯೆ : .............................

(5) ಹುಟ್ಟಿದ ದಿನಾಂಕ : .............................

(6) ಲಿಂಗ : ಪುರುಷ/ಸ್ತ್ರೀ : .............................

(7) ವರ್ಗ : .............................

(8) ರಾಷ್ಟ್ರೀಯತೆ : .............................

(9) ಆಯ್ದ ವಿಷಯಗಳು (ಮೂರು ಭಾಷೆಗಳು + ಮೂರು ವಿಷಯಗಳು) : .............................

(10) ನಿಮ್ಮ ಹಿಂದಿನ ವಿದ್ಯಾರ್ಹತೆ ಮತ್ತು ಓದಿದ ಶಾಲೆ : .............................

ವಿದ್ಯಾರ್ಥಿಯ ಸಹಿ :

ದಿನಾಂಕ :

ಸಮನ್ವಯಾಧಿಕಾರಿಗಳ ಸಹಿ

### 'ಬಿ' ವಿಭಾಗ

(1) ನಿಮ್ಮ ಕುಟುಂಬದಲ್ಲಿರುವ ಸದಸ್ಯರ ಸಂಖ್ಯೇ : .............................

(2) ಕುಟುಂಬದ ವಾರ್ಷಿಕ ವರಮಾನ ............................ ರೂಪಾಯಿಗಳು.

(3) ತಂದೆಯ ವಿದ್ಯಾರ್ಹತೆ : .............................

(4) ತಾಯಿಯ ವಿದ್ಯಾರ್ಹತೆ : .............................

(5) ಎಲ್ಲಿ ವಾಸಿಸುತ್ತಿರಿ ? (I) ಗ್ರಾಮಾಂತರ ............... (II) ನಗರ ...............

(6) ನೀವು ಉದ್ಯೋಗಸ್ಥರೇ ಅಥವಾ ನಿರುದ್ಯೋಗಿಯೇ : ............................

ವಿದ್ಯಾರ್ಥಿಯ ಸಹಿ



UNNATI EDUCATIONS
9899436384, 9654279279

27 ಭರತಭೂಮಿ ಕವಿಗೆ ತಾಯಿಯಂತೆ ಮಮತೆಯನ್ನು ನೀಡುತ್ತದೆ. ಆದ್ದರಿಂದ ಕವಿ ಭಾರತಾಂಬೆಯನ್ನು ನೆಲೆಗೊಳಿಸಲು ಆಶಿಸುವರು. ಇರದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ. **5**

28 ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : **1×5=5**

(1) ನಾವೂ ದೇಶಾಭಿಮಾನವನ್ನು ಬೆಳಸಿಕೊಳ್ಳಬೇಕು. **(ಶುದ್ಧರೂಪದಲ್ಲಿ ಬರೆಯಿರಿ)**

(2) ಸ್ವಚ್ಛ ಭಾರತ ಅಭಿಯಾನದಲ್ಲಿ ನಾವು ಪಾಲ್ಗೋಳ್ಳಬೇಕು : ಈ ವಾಕ್ಯದಲ್ಲಿರುವ ಸರ್ವನಾಮ ........

(3) ಬೌಬೌ : ಅನುಕರಣೆನುಡಿ :: ತುತ್ತತುದಿ .............

(4) ಸುರೇಶ ಬೆಟ್ಟದಿಂದ ಇಳಿದನು ....................... **(ವರ್ತಮಾನ ಕಾಲಕ್ಕೆ ಪರಿವರ್ತಿಸಿರಿ)**

(5) ಗಣೇಶ ನಿಮ್ಮ ಊರು ಯಾವುದು ......................... **(ಲೇಖನ ಚಿಹ್ನೆ ಹಾಕಿ)**

29 ನೀವು ಯಲ್ಲಪ್ಪ/ಲಕ್ಷ್ಮಿ ಊರು ಹಂಚಿನಾಳ, ಎಂದು ಭಾವಿಸಿ ನಿಮ್ಮ ಊರಿಗೆ ಗ್ರಂಥಾಲಯ ಬೇಕು ಎಂದು ವೀನಂತಿಸಿ, ಶಿಕ್ಷಣ ಸಚಿವರು, ಬೆಂಗಳೂರು ಇವರಿಗೆ ಒಂದು ಪತ್ರ ಬರೆಯಿರಿ. **7**

ಅಥವಾ

ಬಾಗಲಕೋಟೆಯ ಮುರಾರ್ಜಿ ವಸತಿ ಶಾಲೆಯೊಂದರಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಮೇಶ/ಗೀತಾ ಎಂದು ಭಾವಿಸಿ ರಾಜಾಜಿನಗರ ಬೆಂಗಳೂರಿನಲ್ಲಿರುವ ನಿಮ್ಮ ತಾಯಿಯವರಿಗೆ ನಿಮ್ಮ ಪರೀಕ್ಷೆಯ ತಾರೀಖು ಮತ್ತು ತಯಾರಿಯ ಕುರಿತು ವಿವರಿಸುತ್ತಾ ಪತ್ರ ಬರೆಯಿರಿ.

30 ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು **50** ಶಬ್ದಗಳಿಗೆ ಮೀರದಂತೆ ವಿಸ್ತರಿಸಿ ಬರೆಯಿರಿ : **5**

(1) ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ ?

(2) ಬೆಳೆಯುವ ಸಿರಿ ಮೊಳಕೆಯಲ್ಲಿ

(3) ಹಿತ್ತಲ ಗಿಡ ಮದ್ದಲ್ಲ

31 ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ : **10**

(1) ಜನಸಂಖ್ಯಾ ಸಮಸ್ಯೆ

(2) ಮೊಬೈಲ್ ಹಾವಳಿ

(3) ಆಟೋಟದ ಮಹತ್ವ



UNNATI EDUCATIONS
9899436384, 9654279279